# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. **711 / 2022**</u>

ಸಿಡಬ್ಲ್ಯೂ- **08**
ಪಿಡಬ್ಲ್ಯೂ-**02**

<u>ದಿನಾಂಕಃ **26.12.2024.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ಮಹೇಶ |
| ತಂದೆಯ/ಗಂಡನ ಹೆಸರುಃ | - | ಹಣಮಂತ |
| ವಯಸ್ಸುಃ | -? | **25** ವರ್ಷ |
| ಉದ್ಯೋಗಃ | - | ಚಾಲಕ. |
| ವಾಸಸ್ಥಳಃ | - | ಯಾದಗಿರಿ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಚಾಸಾ-1 ರವರ ಪರಿಚಯ ನನಗೆ ಇರುತ್ತದೆ. ಚಾಸಾ-9 ಮತ್ತು 10 ರವರ ಪರಿಚಯ ಇರುತ್ತದೆ. ಚಾಸಾ-11 ರಿಂದ 13 ರವರ ಪರಿಚಯ ನನಗೆ ಇರುವುದಿಲ್ಲ. ಮೃತ ಇನ್ಸದ್ ಅಲಿ ತಂದೆ ಹಜರತ್ ಅಲಿ ಮೆಕ್ರಾಣಿ ರವರು ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅಪಘಾತ ವನ್ನು ನೋಡಿರುವುದಿಲ್ಲ. ನನಗೆ ಅಪಘಾತದಿಂದ ಗಾಯಗಳು ಆಗಿರುವುದಿಲ್ಲ. ನಾನು ಪೊಲೀಸರು ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ದಿನಾಂಕಃ 10.04.2022 ರಂದು ಬೆಳಗ್ಗೆ 5 ಗಂಟೆಗೆ ನನ್ನ ಆಟೋ ನಂಃ ಕೆಎ-33-ಬಿ-0947 ನೇದ್ದನ್ನು ತೆಗೆದುಕೊಂಡು ರೈಲ್ವೆ ನಿಲ್ದಾಣದ ಬಳಿ ನಿಂತಾಗ ಮೃತ ಇನ್ಸದ್ ಅಲಿ ತಂದೆ ಹಜರತ್ ಅಲಿ ಮೆಕ್ರಾಣಿ ಇತನು ಬಾಡಿಗೆಗೆ ಬರಲು ನನಗೆ ಕೇಳಿಕೊಂಡಾಗ ನಾನು ಆತನನ್ನು ನನ್ನ ಆಟೋದಲ್ಲಿ

ಹತ್ತಿಸಿಕೊಂಡು ವಾಡಿಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಯಾದಗಿರಿ - ವಾಡಿ ಮುಖ್ಯ ರಸ್ತೆಯ ವೆಂಕಟೇಶ ನಗರ ತಾಂಡಾ ದಾಟಿ ಹೋಗುವಾಗ ಬೆಳಗ್ಗೆ 5-30 ಗಂಟೆಗೆ ತಾಯಮ್ಮ ಗುಡಿ ಹತ್ತಿರ ಕ್ಯಾನಲ್ ಬ್ರಿಡ್ಜ್ ಹತ್ತಿರ ಒಬ್ಬ ಲಾರಿ ಚಾಲಕನು ತನ್ನ ಲಾರಿಯನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ನನ್ನ ಆಟೋಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ಆಟೋ ಅಪಘಾತದ ರಭಸಕ್ಕೆ ಪುಟಿದ್ದು ಮುಳ್ಳುಗಂಟೆಯಲ್ಲಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಇದ್ದ ಇಸ್ಸದ್ ಅಲಿ ತಂದೆ ಹಜರತ್ ಅಲಿ ಮೆಕ್ರಾಣಿ ರವರಿಗೆ ಭಾರಿ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಚಾಸಾ-1 ರವರಿಗೆ ತಿಳಿಸಿ ಕೂಡಲೇ ಅವರಿಗೆ ಅಪಘಾತ ಸ್ಥಳಕ್ಕೆ ಬರಲು ತಿಳಿಸಿದ್ದೆ ಎಂದರೆ ಸರಿಯಲ್ಲ. ಚಾಸಾ-1 ರವರು, ಚಾಸಾ-10 ರವರ ಆಟೋದಲ್ಲಿ ಅಪಘಾತ ಸ್ಥಳಕ್ಕೆ ಬಂದರು ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಲಾರಿಯ ನಂಬರ ನೋಡಲಾಗಿ ಅದರ ನಂಃ ಎಂಹೆಚ್-42-ಟಿ-7338 ಇತ್ತು ಎಂದರೆ ಸರಿಯಲ್ಲ. ಚಾಲಕನ ಹೆಸರು ವಿಚಾರಿಸಲಾಗಿ ಆತನ ಹೆಸರು ಶ್ಯಾಮ್ ಸುಂದರ ತಂದೆ ವಿಜಯಗವಾಡೆ ಸಾಃ ಬೋರ್ಗಾಂವ್ ತಾಃ ಅಕ್ಕಳಕೋಟ್ ಮಹಾರಾಷ್ಟ್ರ ರಾಜ್ಯ ಅಂತಾ ತಿಳಿಸಿದನು ಎಂದರೆ ಸರಿಯಲ್ಲ. ನಂತರ ಮೃತನ ಸಂಬಂಧಿಕರು ಅಪಘಾತದ ವಿಷಯವನ್ನು ಅವರಿಗೆ ತಿಳಿಸಿದ್ದಾಗ ಅವರು ನಮ್ಮಗೆ ದೂರನ್ನು ನೀಡಲು ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಘಟನೆಯಲ್ಲಿ ನನಗೆ ಗಾಯಗಳು ಆಗಿದ್ದರಿಂದ ನನ್ನನ್ನು ಮೊದಲು ಯಾದಗಿರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ನಂತರ ಯಾದಗಿರಿಯ ಶರಣಬಸವ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿನಾಂಕಃ 11.04.2022 ರಂದು ಮೃತನ ಸಂಬಂಧಿಕರು ಬಂದಿದ್ದರು ಆವಾಗ ನಾನು ಅಪಘಾತದ ವಿಷಯವನ್ನು ಅವರಿಗೆ ತಿಳಿಸಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಬಸವೇಶ್ವರ ಆಸ್ಪತ್ರೆ ಯಾದಗಿರಿಯಲ್ಲಿ ದಿನಾಂಕಃ 13.04.2022 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗಳನ್ನು ನಿಪಿ 4 ಎಂದು ಗುರುತಿಸಲಾಯಿತು. ನಂತರ ದಿನಾಂಕಃ 23.06.2022 ರಂದು ನಾನು ನಡೆಸುತ್ತಿದ್ದ ಆಟೋ ಚನ್ನಪ್ಪ ತಂದೆ ಸಾಬಣ್ಣ ಜಾತಗೇರ್ ರವರದ್ದು ಆಗಿದ್ದು ಅದನ್ನು ನಾನು ಖರೀದಿಸುವ ಉದ್ದೇಶದಿಂದ ನನ್ನ ಹತ್ತಿರ ಆಟೋವನ್ನು ನಾನು ಉಳಿಸಿಕೊಂಡಿದ್ದೆ. ನನ್ನ ಹತ್ತಿರ ಸದರಿ ಆಟೋದ ದಾಖಲೆಗಳು ಮತ್ತು ಆಟೋವನ್ನು ಚಲಾಯಿಸಲು ಪರವಾನಿಗೆ ಪತ್ರ ಇರುವುದಿಲ್ಲ ಎಂದು ನಾನು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ನಿಪಿ 4 ಮತ್ತು 5 ರಂತೆ ನಾನು ಹೇಳಿಕೆಯ ಮತ್ತು ಪುರವಣಿ ಹೇಳಿಕೆ ನೀಡಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ನಾನು ಅಭಿಯೋಜನೆಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಬಿ.ಬಿ.ಕೆ. ರವರಿಂದಃ

ಶ್ರೀ.ಎಂ ಎಸ್ ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.